# ಹೆಣ್ಣ ಚರಿತೆ

ಚರಿತ್ರೆ ಮತ್ತು ಚರಿತ್ರೆಯಲ್ಲಿ ದಾಖಲಾದ ಸಂಗತಿಗಳು ಇಂದು ನಿರಂತರವಾಗಿ ಚರ್ಚೆಗೆ ಒಳಗಾಗುತ್ತಿವೆ. ಸಾಮಾನ್ಯರ ಬದುಕು, ಬದುಕಿನಲ್ಲಿನ ಸಂಗತಿಗಳು ಕೇವಲ ಚರ್ಚೆ, ಮಾತುಕತೆಗಳಲ್ಲಿ ವ್ಯಕ್ತವಾಗುತ್ತಾ ಮರೆವಿಗೆ ಸಂದುಬಿಡುತ್ತವೆ. ಆದರೆ ಕೆಲವು ವ್ಯಕ್ತಿಗಳನ್ನು ಕುರಿತಾದ ನೆನಪುಗಳು, ಕತೆಗಳು ಚರಿತ್ರೆಯೆಂಬ ಪುಸ್ತಕದಲ್ಲಿ ನೆಟ್ಟಕಲ್ಲುಗಳಂತೆ ನಿಲ್ಲದೆ ಆಗಾಗ ಹೊರಬರುತ್ತವೆ. ಚರಿತ್ರೆಯ ಚೌಕಟ್ಟನ್ನು ದಾಟಿ ವಾಸ್ತವಕ್ಕೆ ಕಾಲಿಡುತ್ತವೆ, ಚರ್ಚೆ ನಡೆಸುತ್ತವೆ. ಕಾಲದ ಹಂಗನ್ನು ತೊರೆದು ಸಮಕಾಲೀನವಾಗುತ್ತಾ ಮಾತನಾಡುತ್ತವೆ. ಬದುಕನ್ನು ಗಂಭೀರವಾಗಿ, ಜೀವಂತವಾಗಿ, ಪ್ರಾಮಾಣಿಕವಾಗಿ ತೆಗೆದುಕೊಂಡುವವರು ಮಾತ್ರ ಈಗ ನಿರಂತರವಾಗಿ ನಮ್ಮೆದುರು ನಿಂತು ಮಾತನಾಡಲು ಸಾಧ್ಯವಾಗುತ್ತದೆ. ಪುರಾಣ, ಚರಿತ್ರೆ , ಸಾಹಿತ್ಯ, ಧರ್ಮ, ರಾಜಕಾರಣ ಇವೆಲ್ಲಾ ಮನುಷ್ಯನಿಂದ ರಚಿಸಲ್ಪಟ್ಟ ವಿವಿಧ ಜ್ಞಾನದ ಕ್ಷೇತ್ರಗಳು. ಜನಪದ ಪುರಾಣಗಳು ಮನುಷ್ಯನ ಬದುಕಿನ ನಡೆಯನ್ನು ಚಾಲ್ತಿಯಲ್ಲಿರುವ ಕಥೆಗಳ ಮೂಲಕ ಹೇಳಿದರೂ ಅವು ನಮ್ಮ ಅಸ್ಪಷ್ಟ ಹೆಜ್ಜೆಗಳನ್ನು ಸ್ಪಷ್ಟವಾಗಿಸುವಲ್ಲಿನ ಸಾಧ್ಯತೆಗಳಾಗಿಯೇ ತೋರುತ್ತವೆ. ಚರಿತ್ರೆ ಸೃಷ್ಟಿಸುವಲ್ಲಿ ಹೆಣ್ಣು, ಗಂಡು ಸಹಭಾಗಿಗಳಾದರೂ ಹೆಣ್ಣಿನ ಚರಿತ್ರೆಗೂ, ಗಂಡಿನ ಚರಿತ್ರೆಗೂ ಅಗಾಧವಾದ ವ್ಯತ್ಯಾಸವಿದೆ. ಗಂಡು ಕುಟುಂಬದಲ್ಲಿದ್ದೂ ಕುಟುಂಬಕ್ಕೆ ಅಂಟಿಕೊಳ್ಳದೆ ನಾಡು, ನುಡಿಗೆ ಸಮರ್ಪಿಸಿಕೊಂಡ ಮಹಾನ್ ವೀರನಾಗಿ ಗುರುತಿಸಲ್ಪಡುತ್ತಾನೆ. ಕುಟುಂಬವೆನ್ನುವ ಗಂಟು, ನಂಟಿನ ಒಳಗೆ ಗುದ್ದಾಡುತ್ತಲೇ ಹೆಣ್ಣು ತನ್ನ ಚರಿತ್ರೆಯಲ್ಲಿ ದಾಖಲಾಗುತ್ತಾಳೆ. ಹೆಣ್ಣಿನ ಬದುಕಿಗೆ ಮಾತ್ರವಲ್ಲ ಮನಸ್ಸಿಗೂ, ಶರೀರಕ್ಕೂ ಸಾಮಾಜಿಕ, ಸಾಂಸಾರಿಕ ಜವಾಬ್ದಾರಿಗಳಿರುವುದರಿಂದ ಏಕಕಾಲದಲ್ಲಿ ಅವಳು ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಬೇಕಾಗಿದೆ. ಕಿತ್ತೂರು ರಾಣಿ ಚೆನ್ನಮ್ಮನೆಂದರೆ ಮಗನನ್ನು ಮಡಿಲಿಗೆ ಕಟ್ಟಿಕೊಂಡು ಬ್ರಿಟೀಷರ ವಿರುದ್ಧ ಯುದ್ಧಕ್ಕಿಳಿದ ಚಿತ್ರವೇ ನಮ್ಮ ಕಣ್ಣಮುಂದೆ ಮೂಡುವುದು. ಒನಕೆ ಓಬವ್ವನೆಂದರೆ ದುಡಿದು ಹಸಿದು ಬಂದ ಗಂಡನಿಗೆ ಉಣಲಿಕ್ಕೆ ನೀರು ತರಲೆಂದು ಬಂದವಳು ಶತ್ರುಸಂಹಾರಕ್ಕೆ ನಿಂತ ಧೀರ ಹೆಣ್ಣುಮಗಳಾಗಿಯೇ ನಮಗೆ ತೋರುತ್ತಾಳೆ.

ಕೆರೆಗೆ ಹಾರವಾಗಬೇಕಿರುವ ಭಾಗೀರಥಿ ಎಲ್ಲರೂ ಉಂಡಾದ ಮೇಲೆ ಉದ್ದೇಶಪೂರ್ವಕವಾಗಿ ಮರೆತ ಚಿನ್ನದ ಗಿಂಡಿಯನ್ನು ತರಲೆಂದು ಕೆರೆಗೆ ಹೋಗುತ್ತಾಳೆ. ಜನಪದ ಸಾಹಿತ್ಯದಲ್ಲಿ ಉಸಿರು ಕಟ್ಟಿಸುವ ದಾಂಪತ್ಯದಿಂದ ಬೇಸತ್ತ ಹೆಣ್ಣುಮಕ್ಕಳು ಚಿಕ್ಕ ಉಂಗುರಕ್ಕೆ ನಾರಿ ಮನಸೋತಳೋ ಎಂದೋ, ಮೊಗ್ಗಾಗಿ ಬಾರೋ ತುರುಬೀಗೆ ಎಂಬ ಹಾಡಾಗಿಯೋ ಜನರ ಮುಂದೆ ನಿಲ್ಲುತ್ತಾರೆ. ಚರಿತ್ರೆ, ಶಾಸನಗಳ ಅಧ್ಯಯನದಿಂದ ಶತ್ರುಗಳು ತಮ್ಮ ರಾಜ್ಯವನ್ನು ಗೆದ್ದರೆ ತಮ್ಮ ಹೆಂಡತಿಯರು ಸಾಲಾಗಿ ಬಾವಿಗೆ ಹಾರಲೆಂದೋ, ಅಗ್ನಿಪ್ರವೇಶ ಮಾಡಲೆಂದೋ, ಮಹಾಸತಿಯರಾಗಲೆಂದೋ ಅರಸನನ್ನು ಒಳಗೊಂಡಂತೆ ಸಾಮಾನ್ಯ ಸೈನಿಕರು ಬಯಸುತ್ತಾರೆ. ಇದಕ್ಕೆ ವೇದ ಶಾಸ್ತ್ರಗಳು ಸಹ ಸಾಥ್ ಕೊಡುತ್ತವೆ. ಅಷ್ಟಕ್ಕೂ ಚರಿತ್ರೆ ಬರೆಯುವವರು ಯಾರು. ಅವರು ಕಾಲಾನುಕಾಲದಿಂದಲೂ ಅಕ್ಷರ, ಪಾಂಡಿತ್ಯವನ್ನು ಒಲಿಸಿಕೊಂಡ ಪುರುಷರೇ ಆಗಿದ್ದಾರೆ. ಹೀಗಾಗಿ ಹೆಣ್ಣು ಕಪ್ಪು ಮತ್ತು ಬಿಳಿ ಬಣ್ಣಗಳಲ್ಲಿ ಮಾತ್ರ ಚಿತ್ರಿತಳಾಗಿದ್ದಾಳೆ. ಅವಳ ಲೋಕದ ವಿವಿಧ ಬಣ್ಣಗಳನ್ನು ಇನ್ನೂ ಸರಿಯಾಗಿ ಅರ್ಥೈಸಲಾಗಿಲ್ಲ. ಪತಿವ್ರತೆ ಹಾಗೂ ಪತಿತೆ ಎಂಬ ಮಿತಿಯ ಒಳಗಡೆ ಅವಳನ್ನು ಚಿತ್ರಿಸಲಾಗಿದೆ. ಸಂಗ್ಯಾಬಾಳ್ಯಾ ಪ್ರಸಿದ್ಧ ಬಯಲಾಟವಾಗಿದ್ದು ಡಾ. ಚಂದ್ರಶೇಖರ ಕಂಬಾರರು ಇದನ್ನು ನಾಟಕವಾಗಿಸಿದ್ದಾರೆ. ಈ ನಾಟಕ ಅದರ ವಸ್ತುವಿನಿಂದಲೇ ಪ್ರಸಿದ್ಧವಾಗಿದೆ.

ಮದುವೆಯಾಗಿರುವ ಗಂಗಿ ಊರಿನ ಕುಂಟಲಗಿತ್ತಿಯ ಪ್ರಲೋಭನೆಗೆ ಒಳಗಾಗಿ ಸಾಹುಕಾರ ಸಂಗ್ಯಾನ ಸ್ನೇಹ ಬೆಳೆಸುತ್ತಾಳೆ. ಬಾಳ್ಯಾ ಸಂಗ್ಯಾನ ಆತ್ಮೀಯ ಗೆಳೆಯ . ಗಂಡ ಈರ್ಯ ಹಿಂತಿರುಗಿ ಬಂದಾಗ ಬಾಳ್ಯಾನ ಸಹಾಯದಿಂದಲೇ ಸಂಗ್ಯಾನನ್ನು ಕೊಂದು ತಮ್ಮಂದಿರೊಂದಿಗೆ ಕೋರ್ಟ್‌ನಲ್ಲಿ ನಿಲ್ಲುತ್ತಾನೆ. ಮೂಲದಲ್ಲಿನ ನೈಜ ಘಟನೆಯನ್ನು ಪತ್ತಾರಮಾಸ್ತರ್ ಎಂಬ ನಾಟಕದ ಮೇಷ್ಟು ತಿರುಚಿ ಬರೆದಿದ್ದಾನೆ. ಪತ್ತಾರಮಾಸ್ತರ್ ಪತಿವ್ರತೆಯಾದ ಗಂಗಿಯನ್ನು ಕುಂಟಣಗಿತ್ತಿಯ ಮೂಲಕ ಪಡೆಯಲು ಪ್ರಯತ್ನಿಸುತ್ತಾನೆ. ಆಕೆ ಒಲಿಯದಿದ್ದಾಗ ರೊಚ್ಚಿಗೆದ್ದು ತಾನು ಬರೆದ ನಾಟಕದಲ್ಲಿ ಅವಳನ್ನು ಪತಿತೆಯನ್ನಾಗಿಸುತ್ತಾನೆ. ಅವಳ ಮೇಲಿನ ಸೇಡುಗಾಗಿಯೇ ಸಂಗ್ಯಾಬಾಳ್ಯಾ ಎಂಬ ನಾಟಕ ಬರೆಯುತ್ತಾನೆ. ಪತ್ತಾರಮಾಸ್ತರನ ಈ ಕತೆಯನ್ನು ಕಂಬಾರರು ಯಥಾವತ್ತಾಗಿ ಸ್ವೀಕರಿಸುತ್ತಾರೆ. ಹೆಣ್ಣು ಸುಲಭವಾಗಿ ಹಾದರಕ್ಕೆ ಒಲಿಯುವವಳು ಎಂಬ ಪುರುಷ ದೃಷ್ಟಿಯಿಂದ ಬರೆದ ಈ ನಾಟಕ ದೇಸಿ ಭಾಷೆ ಹಾಗೂ ವಸ್ತುವಿನಿಂದಾಗಿಯೇ ಪ್ರಸಿದ್ಧವಾಗಿದೆ. ಚರಿತ್ರೆ ಮತ್ತು ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಆಗುವ ಪ್ರಮಾದವನ್ನು ಕಾಲಾನಂತರ ಅಧ್ಯಯನ ಮಾಡುವವರು ಸರಿಪಡಿಸಲೇಬೇಕು. ಇಂತಹ ಕೆಲಸವನ್ನು ಪ್ರಸಿದ್ಧ ಸಂಶೋಧಕರಾದ ಡಾ.ಎಂ. ಎಂ. ಕಲಬುರ್ಗಿಯವರು ಮಾಡುತ್ತಾರೆ. ಪತ್ತಾರ ಮಾಸ್ತರ ತನಗೆ ದಕ್ಕದ ಹೆಣ್ಣಿಗೆ ಮಾಡಿದ ಅಪಮಾನವನ್ನು ಸರಿಪಡಿಸಲೆಂಬಂತೆ 'ಖರೆ ಖರೆ ಸಂಗ್ಯಾಬಾಳ್ಯಾ' ಎಂಬ ನಾಟಕವನ್ನು ಬರೆಯುತ್ತಾರೆ. ಚರಿತ್ರೆಯೂ ಸಹ ಒಮ್ಮೊಮ್ಮೆ ಏಕಮುಖವಾದದ್ದು, ಸೇಡಿನಿಂದ ಸಂಕುಚತತೆಯಿಂದ ಕೂಡಿದ್ದು ಎಂಬುದನ್ನು ಇಂತಹ ಹಲ ಘಟನೆಗಳು ಸಾಬೀತು ಮಾಡುತ್ತವೆ. ಎಂ.ಎಂ. ಕಲಬುರ್ಗಿಯವರಂತೆ ಸಂಶೋಧನೆಯನ್ನು ಗಂಭೀರವಾಗಿ ಸ್ವೀಕರಿಸಿದವರು ಸತ್ಯವನ್ನು ಸತ್ಯದ ರೂಪದಲ್ಲಿಯೇ ಹಿಡಿದಿಡುವ ಪ್ರಯತ್ನ ಮಾಡುತ್ತಾರೆ. ಹೀಗಾಗಿ ಅವಳ ಚರಿತ್ರೆಯನ್ನು ಕಟ್ಟುವುದೆಂದರೆ ಸುಲಭದ ಮಾತಲ್ಲ. ಅವನ ಚರಿತ್ರೆಯನ್ನು ಮುರಿದು ಕಟ್ಟದಲ್ಲದೆ ಹೆಣ್ಣಿನ ಹೊಸ ಚರಿತ್ರೆ ಹುಟ್ಟಲು ಸಾಧ್ಯವಿಲ್ಲ.

■ **ಅಮೃತಮತಿ**

## ಮಾತೇ ಮುತ್ತು

- ಚಿಂತನೆಗಳನ್ನು ಕೃತಿಗಿಳಿಸುವ ಸಾಧನೆಯೇ ಯಶಸ್ಸಾಗಿ ಬೆಳೆಯುತ್ತದೆ.
  —ವಾಲ್ಟೇರ್
- ಸಂಸ್ಕೃತಿಯು ಮುಖ್ಯವಾಗಿ ಒಂದು ಸಮಾಜ ಅಥವಾ ರಾಷ್ಟ್ರವು ಶತಮಾನಗಳ ಅನುಭವದಿಂದ ಸಂಗ್ರಹಿಸಿದ ಅಂತಃಸ್ಫೂರ್ತಿ ಮತ್ತು ವಿಶ್ವಾಸದ ಪ್ರತೀಕವಾಗಿದೆ.
  —ರಾಜೇಂದ್ರ ಪ್ರಸಾದ್
- ಪ್ರಪಂಚದಲ್ಲಿ ಬಲಾಢ್ಯರಾಗಿರುವುದು ಮಹತ್ವದ್ದಲ್ಲ. ಬಲವನ್ನು ಸದುಪಯೋಗಕ್ಕಾಗಿ ಉಪಯೋಗಿಸುವುದು ಮಹತ್ವದ್ದು.
  —ಫ್ರಾನ್ಸಿಸ್ ಬೇಕನ್
- ಗಂಡಸು ಮದುವೆ ಮಾಡಿಕೊಳ್ಳದಿದ್ದರೆ 'ಬ್ರಹ್ಮಚಾರಿ' ಎಂಥ ಘನವಾದ ಬಿರುದು.
  —ಅನಾಮಿಕ
- ಮೃದುವಾಗಿದ್ದರೆ ಹೆಣ್ಣು ಒಂದು ವೀಣೆ, ಅದು ಸಿಡುಕಿಕೊಂಡರೆ ರುದ್ರವೀಣೆ.
  —ಗೌರೀಶ್ ಕಾಯ್ಕಿಣಿ
- ಮುದುಕರಿಗೆ ರುಚಿ ಇರುವುದಿಲ್ಲ, ಹುಡುಗರಿಗೆ ದೃಷ್ಟಿ ಇರುವುದಿಲ್ಲ.
  —ಪಾಪು
- ಆಶಾವಾದವಿಲ್ಲದಲ್ಲಿ ಪ್ರಯತ್ನವೂ ಮಾಯವಾಗುತ್ತದೆ.
  —ಡಾ. ಜಾನ್ಸನ್
- ಒಬ್ಬ ಹೆಂಗಸಿನೊಡನೆ ದೀರ್ಘಕಾಲ ಜೀವಿಸುವ ಗಂಡು ಜೀವನವನ್ನು ಅವಳದೃಷ್ಟಿಯಿಂದ ನೋಡಲು ಕಲಿಯುತ್ತಾನೆ.
  —ಬಿ.ಜಿ.ಎಸ್. ಹಾಲ್ಡೇನ್
- ಯಾರಿಗೂ ತಾನು ಒಡೆಯನಾಗದ ಹಾಗೂ ಯಾರನ್ನೂ ತನ್ನ ಒಡೆಯರೆನ್ನದವನೇ ನಿಜವಾಗಿಯೂ ದೊಡ್ಡ ಮನುಷ್ಯ.
  —ಖಲೀಲ್ ಗಿಬ್ರಾನ್